Akashvani : Bangalore
National Bulletin In Kannada
15.03.2025 : 13.10hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

15.03.2025 : 13.10hrs

******

ಮುಖ್ಯಾಂಶಗಳು

1. ಅಸ್ಸಾಂನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ ಅತ್ಯಾಧುನಿಕ ಲಚಿತ್ ಬೋರ್‌ಫುಕನ್ ಪೊಲೀಸ್ ಅಕಾಡೆಮಿ ಉದ್ಘಾಟನೆ
2. ಗ್ರಾಹಕರ ಸಬಲೀಕರಣಕ್ಕಾಗಿ ಕುಂದುಕೊರತೆ ಪರಿಹಾರ-ಕಾರ್ಯವಿಧಾನ ಆಧುನೀಕರಣ - ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ
3. ೨೦೨೪-೨೫ನೇ ಹಣಕಾಸು ವರ್ಷದ ಮಾರ್ಚ್ ೨ರ ವೇಳೆಗೆ ರೈಲ್ವೆ ಸರಕು ಸಾಗಣೆ ೧.೪೬ ದಶಲಕ್ಷ ಟನ್‌ಗೆ ಏರಿಕೆ
4. ಧಾರ್ಮಿಕ ಭೀತಿ ಸೃಷ್ಟಿಸುವ ಮತಾಂಧತೆಯ ವಿರುದ್ಧ ಸಮಗ್ರ ಹೋರಾಟಕ್ಕೆ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಭಾರತ ಕರೆ
5. ಡಬ್ಲ್ಯೂಪಿಎಲ್ ೨೦೨೫ - ಫೈನಲ್‌ನಲ್ಲಿಂದು ಡೆಲ್ಲಿ ಕ್ಯಾಪಿಟಲ್ಸ್ - ಮುಂಬೈ ಇಂಡಿಯನ್ಸ್ ಸೆಣಸು

*****

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಅಸ್ಸಾಂನಲ್ಲಿ ಹಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಗೋಲಾಘಾಟ್ ಜಿಲ್ಲೆಯ ದೇರ್ಗಾಂವ್‌ನಲ್ಲಿಂದು ಅವರು, ಅತ್ಯಾಧುನಿಕ ಲಚಿತ್ ಬರ್ಫುಕನ್ ಪೊಲೀಸ್ ಅಕಾಡೆಮಿ ಉದ್ಘಾಟಿಸಿದರು. ಇದೇ ವೇಳೆ ಪೊಲೀಸ್ ಅಕಾಡೆಮಿಯ ವಸತಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗ ಸಚಿವ ಸರ್ಬಾನಂದ

ಸೋನೋವಾಲ್ ಉಪಸ್ಥಿತರಿದ್ದಾರೆ.ಇಂದು ಮಧ್ಯಾಹ್ನ, ಗೃಹ ಸಚಿವರು ಅಸ್ಸಾಂ ರೈಫಲ್ಸ್ ನೆಲೆಯನ್ನು ಐಜ್ವಾಲ್ ನಗರದಿಂದ ಜೋಖಾವ್ಸಾಂಗ್‌ಗೆ ಸ್ಥಳಾಂತರಿಸುವ ಸಮಾರಂಭದಲ್ಲಿ ಭಾಗವಹಿಸಲು ಮಿಜೋರಾಂಗೆ ಭೇಟಿ ನೀಡಲಿದ್ದಾರೆ. ನಾಳೆ, ಅವರು ಕೊಕ್ರಝಾರ್ ಜಿಲ್ಲೆಯ ದೋಟ್ಮಾದಲ್ಲಿ ಆಲ್ ಬೋಡೋ ಸ್ಟೂಡೆಂಟ್ಸ್ ಯೂನಿಯನ್‌ನ ೫೭ನೇ ವಾರ್ಷಿಕ ಸಮ್ಮೇಳನವನ್ನುದ್ದೇಶಿಸಿ ಮಾತನಾಡಲಿದ್ದಾರೆ. ನಂತರ, ಗುವಾಹಟಿಯಲ್ಲಿ ಎಂಟು ಈಶಾನ್ಯ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಈಶಾನ್ಯ ರಾಜ್ಯಗಳಲ್ಲಿ ಹೊಸ ಕ್ರಿಮಿನಲ್ ಕಾನೂನುಗಳ ಅನುಷ್ಠಾನವನ್ನು ಪರಿಶೀಲಿಸಲಿದ್ದಾರೆ. ಅವರು ನಿನ್ನೆ ಸಂಜೆ ಅಸ್ಸಾಂನ ಗೋಲಾಘಾಟ್‌ಗೆ ಆಗಮಿಸಿದರು.

*****

ಇಂದು ವಿಶ್ವ ಗ್ರಾಹಕ ಹಕ್ಕುಗಳ ದಿನ.ಗ್ರಾಹಕರ ಹಕ್ಕುಗಳು ಮತ್ತು ಅದರ ರಕ್ಷಣೆ ಎತ್ತಿಹಿಡಿಯುವ ಅಗತ್ಯವನ್ನು ನೆನಪಿಸುವ ಈ ದಿನವನ್ನು ಪ್ರತಿ ವರ್ಷ ಮಾರ್ಚ್ ೧೫ ರಂದು ಆಚರಿಸಲಾಗುತ್ತದೆ. ಎಲ್ಲಾ ಗ್ರಾಹಕರ ಮೂಲಭೂತ ಹಕ್ಕುಗಳನ್ನು ಉತ್ತೇಜಿಸಲು ಮತ್ತು ಆ ಹಕ್ಕುಗಳನ್ನು ಗೌರವಿಸಿ, ರಕ್ಷಿಸಿ, ಪ್ರೋತ್ಸಾಹಿಸಲು ಈ ದಿನ ಅವಕಾಶ ಒದಗಿಸುತ್ತದೆ. 'ಸುಸ್ಥಿರ ಜೀವನಶೈಲಿಯೆಡೆಗೆ ನ್ಯಾಯಯುತ ಪರಿವರ್ತನೆ' ಎಂಬುದು ೨೦೨೫ ರ ವಿಶ್ವ ಗ್ರಾಹಕ ಹಕ್ಕುಗಳ ದಿನದ ಧ್ಯೇಯವಾಕ್ಯವಾಗಿದೆ. ಗ್ರಾಹಕರ ಹಕ್ಕುಗಳನ್ನು ರಕ್ಷಿಸಲು ಮತ್ತು ಅವರ ಕುಂದುಕೊರತೆಗಳನ್ನು ಶೀಘ್ರವಾಗಿ ಪರಿಹರಿಸಲು ಸರ್ಕಾರ ವಿವಿಧ ಕ್ರಮಗಳನ್ನು ತೆಗೆದುಕೊಂಡಿದೆ. ಗ್ರಾಹಕ ವ್ಯವಹಾರಗಳ ಸಚಿವಾಲಯವು ಜಾಗೋ ಗ್ರಾಹಕ ಜಾಗೋ ಮೂಲಕ ವಿವಿಧ ಗ್ರಾಹಕ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಕುಂದುಕೊರತೆಗಳಿಗೆ ಪರಿಹಾರವನ್ನು ತ್ವರಿತಗೊಳಿಸಲು ರಾಷ್ಟ್ರೀಯ ಗ್ರಾಹಕ ಸಹಾಯವಾಣಿ, ಸಾವಿರಕ್ಕೂ ಹೆಚ್ಚು ಕಂಪನಿಗಳೊಂದಿಗೆ ಪಾಲುದಾರಿಕೆ ಹೊಂದಿದೆ. ವಿಶ್ವ ಗ್ರಾಹಕ ಹಕ್ಕುಗಳ ದಿನದ ಅಂಗವಾಗಿ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಪಾಲ್ಗೊಂಡರು. ಈ ವೇಳೆ ಮಾತನಾಡಿದ ಅವರು, ಗ್ರಾಹಕರಿಗೆ ಉಪಯುಕ್ತ ಮಾಹಿತಿ ನೀಡುವ ಜತೆಗೆ ದಾರಿ ತಪ್ಪಿಸುವ ಮಾಹಿತಿಯ ವಿರುದ್ಧ ರಕ್ಷಣೆ ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ. ಗ್ರಾಹಕ ಸಬಲೀಕರಣದ ಮೇಲೆ

ಕೇಂದ್ರೀಕರಿಸುವ ಮೂಲಕ ಸರ್ಕಾರ, ಕುಂದುಕೊರತೆ ಪರಿಹಾರ ಕಾರ್ಯ ವಿಧಾನವನ್ನು ಆಧುನೀಕರಿಸಿದೆ ಎಂದರು. ಸುಸ್ಥಿರ ಉತ್ಪನ್ನಗಳನ್ನು ಹೆಚ್ಚು ಕೈಗೆಟಕುವಂತೆ ಮಾಡಲು ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ. ಪರಿಸರಸ್ನೇಹಿ ಉತ್ಪಾದನಾ ಪ್ರಕ್ರಿಯೆಗಳು ಮತ್ತು ಸುಸ್ಥಿರ ನಾವಿನ್ಯತೆಗಳನ್ನು ಅಳವಡಿಸಿಕೊಳ್ಳಲು ಕೈಗಾರಿಕೆಗಳನ್ನು ಸರ್ಕಾರ ಪ್ರೋತ್ಸಾಹಿಸುತ್ತಿದೆ ಎಂದರು.

***ಧ್ವನಿ***ಪ್ರಲ್ಹಾದ್ ಜೋಶಿ

*****

೨೦೨೪-೨೫ನೇ ಹಣಕಾಸು ವರ್ಷದ ಏಪ್ರಿಲ್‌ನಿಂದ ೨೦೨೫ರ ಫೆಬ್ರವರಿವರೆಗೆ ರೈಲ್ವೆ ಸರಕು ಸಾಗಣೆ ೧.೪೭ ದಶಲಕ್ಷ ಟನ್‌ಗೆ ಏರಿಕೆಯಾಗಿದೆ. ಇದು ೨೦೨೩-೨೪ರ ಪೂರ್ಣ ಹಣಕಾಸು ವರ್ಷದಲ್ಲಿ ಸಾಧಿಸಿದ ಒಂದು ಸಾವಿರದ ೪೪೩.೧೬೬ ದಶಲಕ್ಷ ಟನ್ ಸರಕು ಸಾಗಣೆಗಿಂತ ಹೆಚ್ಚಿನದ್ದಾಗಿದೆ ಎಂದು ರೈಲ್ವೆ ಸಚಿವಾಲಯ ಮಾಹಿತಿ ಬಿಡುಗಡೆಗೊಳಿಸಿದೆ. ಭಾರತೀಯ ರೈಲ್ವೆ ೨೦೨೭ರ ವೇಳೆಗೆ ಮೂರು ಸಾವಿರ ದಶಲಕ್ಷ ಟನ್ ಸರಕು ಸಾಗಣೆ ಮಾಡುವ ಮಹತ್ವಾಕಾಂಕ್ಷೆ ಗುರಿ ಹೊಂದಿದೆ, ಈ ಗುರಿಯೆಡೆಗೆ ಸಾಗುವ ಪಥದಲ್ಲಿ ಪ್ರಸ್ತುತ ಹಣಕಾಸು ವರ್ಷದಲ್ಲಿ ಮಾರ್ಚ್ ೨ರ ವೇಳೆಗೆ ಒಂದು ಸಾವಿರದ ೪೬೫.೩೭೧ ದಶಲಕ್ಷ ಟನ್ ಸರಕು ಸಾಗಣೆ ಸಾಧಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಕಳೆದ ೧೧ ವರ್ಷಗಳಲ್ಲಿ ಸರಕು ಹಾಗೂ ಪ್ರಯಾಣಿಕ ರೈಲುಗಳ ಸಂಚಾರದಲ್ಲಿ ಏರಿಕೆ ಕಂಡಿದ್ದು, ದೇಶಾದ್ಯಂತ ೩೪ ಸಾವಿರ ಕಿಲೋಮೀಟರ್‌ಗಿಂತಲೂ ಹೆಚ್ಚಿನ ಹೊಸ ರೈಲು ಹಳಿಗಳನ್ನು ಅಳವಡಿಸಲಾಗಿದೆ.

*****

ಒಂದು ದಿನದ ತಮಿಳುನಾಡು ಭೇಟಿಗಾಗಿ ಇಂದು ಕೇಂದ್ರ ರೈಲ್ವೆ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಚೆನ್ನೈಗೆ ಆಗಮಿಸಿದ್ದಾರೆ. ಈ ವೇಳೆ ಅವರು, ಶ್ರೀ ಪೆರಂಬುದೂರುನಲ್ಲಿ ಝುಟ್‌ವರ್ಕ್ ಎಲೆಕ್ಟ್ರಾನಿಕ್ಸ್‌ನ ನೂತನ ಕ್ಯಾಂಪಸ್ ಉದ್ಘಾಟನೆ ನೆರವೇರಿಸಲಿದ್ದಾರೆ. ಇದೇ ವೇಳೆ ಸಚಿವರು, ಹೈಪರ್ ಲೂಪ್ ಪಾಡ್‌ಗೆ ಭೇಟಿ ನೀಡಲಿದ್ದು, ಐಐಟಿಯ ಥೈಯೂರ್ ಕ್ಯಾಂಪಸ್‌ನ ತಂಡದೊಂದಿಗೆ ಸಂವಾದ ನಡೆಸಲಿದ್ದಾರೆ.

*****

ಎಲ್ಲಾ ಧರ್ಮಗಳ ಮೇಲೆ ದ್ವೇಷ ಸಾರುತ್ತಾ, ಧಾರ್ಮಿಕ ಭೀತಿಯನ್ನು ಸೃಷ್ಟಿಸುವ ಮತಾಂಧತೆಯ ವಿರುದ್ಧ ಹೆಚ್ಚು ಸಮಗ್ರ ಹೋರಾಟಕ್ಕೆ ಭಾರತ ಕರೆ ನೀಡಿದೆ. ವಿಶ್ವ ಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಪಿ. ಹರೀಶ್, ಪೂಜಾ ಸ್ಥಳಗಳ ಮೇಲಿನ ಹಾಗೂ ಧರ್ಮಾಧಾರಿತ ಹಿಂಸಾಚಾರದ ಕುರಿತು ಕಳವಳ ವ್ಯಕ್ತಪಡಿಸಿದ್ದು, ಜಾಗತಿಕ ಸಮಾಜವನ್ನು ವಿವಿಧ ರೂಪಗಳಲ್ಲಿ ಬೆದರಿಸುವ ಮತಾಂಧತೆಯ ವಿರುದ್ಧ ಹೋರಾಡುವಲ್ಲಿ ಅರ್ಥಪೂರ್ಣ ಪ್ರಗತಿ ಸಾಧಿಸಲು ಮೊದಲು ಅದನ್ನು ಒಪ್ಪಿಕೊಳ್ಳಬೇಕು ಎಂದಿದ್ದಾರೆ. ಅಂತಾರಾಷ್ಟ್ರೀಯ ಇಸ್ಲಾಮೋ ಫೋಬಿಯಾ ವಿರುದ್ಧ ಹೋರಾಟ ದಿನದ ಸ್ಮರಣಾರ್ಥ ನಡೆದ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು. ವಾಸ್ತವಿಕವಾಗಿ ಪ್ರತಿಯೊಂದು ಪ್ರಮುಖ ನಂಬಿಕೆಗೆ ನಾಲ್ಕು ವಿಶ್ವ ಧರ್ಮಗಳಾದ ಹಿಂದು, ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳ ಜನ್ಮಸ್ಥಳವಾದ ಭಾರತದಲ್ಲಿ ನೆಲೆಯಿದೆ. ಧಾರ್ಮಿಕ ತಾರತಮ್ಯ ದ್ವೇಷ ಮತ್ತು ಹಿಂಸಾಚಾರ ಮುಕ್ತ ಜಗತ್ತಿನ ನಿರ್ಮಾಣದೆಡೆಗೆ ಸಾಗುವುದು ಭಾರತದ ವಿಧಾನವಾಗಿದೆ ಎಂದಿರುವ ಅವರು, ಎಲ್ಲಾ ನಾಗರಿಕರನ್ನು ಸಮಾನವಾಗಿ ನಡೆಸಿಕೊಂಡು ಧಾರ್ಮಿಕ ತಾರತಮ್ಯ ಉತ್ತೇಜಿಸುವ ನೀತಿಗಳನ್ನು ಪಾಲಿಸದೆ ತಿರಸ್ಕರಿಸಲು ಇತರ ರಾಷ್ಟ್ರಗಳಿಗೆ ಕರೆ ನೀಡಿದ್ದಾರೆ.

*****

ಕೆನಡಾದ ನೂತನ  ಪ್ರಧಾನಿಯಾಗಿ ಮಾರ್ಕ್ ಕಾರ್ನಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಒಂಬತ್ತು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ನಂತರ ಐವತ್ತೊಂಬತ್ತು ವರ್ಷದ ಕಾರ್ನಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಕೆನಡಾ ರಾಷ್ಟ್ರದ ಮುಖ್ಯಸ್ಥರಾಗಿರುವ ಕಿಂಗ್ ಚಾರ್ಲ್ಸ್ ಅವರ ವೈಯಕ್ತಿಕ ಪ್ರತಿನಿಧಿಯಾದ ಗವರ್ನರ್ ಜನರಲ್ ಮೇರಿ ಸೈಮನ್ ನಿನ್ನೆ ಒಟ್ಟಾವಾದಲ್ಲಿ ನಡೆದ ೨೪ ನೇ ಪ್ರಧಾನಮಂತ್ರಿ ಪ್ರಮಾಣ ವಚನ  ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭದಲ್ಲಿ ೨೪ ಸದಸ್ಯರನ್ನೊಳಗೊಂಡ ನೂತನ ಸಚಿವ ಸಂಪುಟ ಪ್ರಮಾಣವಚನ ಸ್ವೀಕರಿಸಿತು. ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ತಮ್ಮ ಮೊದಲ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಮಾರ್ಕ್ ಕಾರ್ನಿ, ಕೆನಡ ಮೂಲಭೂತವಾಗಿ ಒಂದು ವಿಭಿನ್ನ ರಾಷ್ಟ್ರವಾಗಿದ್ದು, ಎಂದಿಗೂ ಅಮೆರಿಕದ ಭಾಗವಾಗುವುದಿಲ್ಲ. ಕೆನಡ ಸಾರ್ವಭೌಮತ್ವಕ್ಕೆ

ಗೌರವ ತೋರಿಸಿದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಲು ಸಿದ್ಧ ಎಂದು ಹೇಳಿದ್ದಾರೆ.

*****

ಅಮೆರಿಕ ಪ್ರಸ್ತಾಪಿಸಿರುವ ಮಧ್ಯಂತರ ೩೦ ದಿನಗಳ ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸಲು ರಷ್ಯಾಗೆ ಫ್ರೆಂಚ್ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರಾನ್ ಕರೆ ನೀಡಿದ್ದಾರೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝುಲೆನ್ಸ್ಕಿ ಹಾಗೂ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರೊಂದಿಗಿನ ಮಾತುಕತೆಗಳ ಬಳಿಕ ರಷ್ಯಾದ ವಿಳಂಬನಾ ನೀತಿಯನ್ನು ಟೀಕಿಸಿದ್ದಾರೆ. ಸಾಮಾಜಿಕ ಜಾಲತಾಣದ ಸಂದೇಶದಲ್ಲಿ, ಉಕ್ರೇನ್‌ನಲ್ಲಿ ರಷ್ಯಾದ ಆಕ್ರಮಣ ಸ್ಥಗಿತಗೊಳ್ಳಬೇಕು ಎಂದಿರುವ ಅವರು, ಉಕ್ರೇನ್‌ಗೆ ಸಹಾಯ ಒದಗಿಸುವ ಬದ್ಧತೆಯನ್ನು ಪುನರುಚ್ಛರಿಸಿದ್ದಾರೆ. ಏತನ್ಮಧ್ಯೆ, ಅಮೆರಿಕ ಪ್ರಸ್ತಾಪಿಸಿರುವ ೩೦ ದಿನಗಳ ಮಧ್ಯಂತರ ಕದನ ವಿರಾಮಕ್ಕೆ ಉಕ್ರೇನ್‌ನ ಬೆಂಬಲವಿದೆ ಎಂಬುದನ್ನು ಅಧ್ಯಕ್ಷ ಝುಲೆನ್ಸ್ಕಿ ಪುನರುಚ್ಛರಿಸಿದ್ದು, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಮಾತುಗಳ ವಿಶ್ವಾಸಾರ್ಹತೆ ಕುರಿತಂತೆ ಎಚ್ಚರಿಕೆ ನೀಡಿದ್ದಾರೆ.

*****

ಆಕಾಶವಾಣಿಯ ಜನಪ್ರಿಯ ಮಾಸಿಕ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಇದೇ ೩೦ರ ಭಾನುವಾರ ಬೆಳಗ್ಗೆ ೧೧ ಗಂಟೆಗೆ ದೇಶ-ವಿದೇಶಗಳಲ್ಲಿರುವ ಭಾರತೀಯರೊಂದಿಗೆ ತಮ್ಮ ಮನದ ಮಾತನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೦ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮಕ್ಕಾಗಿ ಸಾರ್ವಜನಿಕರಿಂದ ಅನಿಸಿಕೆ, ಅಭಿಪ್ರಾಯಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತರು ಟೋಲ್ ಫ್ರೀ ಸಂಖ್ಯೆ ೧೮೦೦-೧೧-೭೮೦೦ ಮೂಲಕ ತಮ್ಮ ವಿಚಾರಗಳನ್ನು ಹಂಚಿಕೊಳ್ಳಬಹುದು.

*****

ಜಾರ್ಖಂಡ್‌ನ ಗಿರಿಧಿ ಜಿಲ್ಲೆಯಲ್ಲಿ ನಿನ್ನೆ ಹೋಳಿ ಮೆರವಣಿಗೆ ಸಮಯದಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ಭುಗಿಲೆದ್ದ ಪರಿಣಾಮ ಹಲವಾರು ಮಂದಿ ಗಾಯಗೊಂಡಿದ್ದಾರೆ. ಈ ವೇಳೆ ದುಷ್ಕರ್ಮಿಗಳು

ಸುತ್ತಮುತ್ತಲಿನ ಹಲವಾರು ಅಂಗಡಿಗಳು ಹಾಗೂ ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಸ್ಥಳದಲ್ಲಿ ನಿಯೋಜಿಸಲಾಗಿದ್ದ ಪೊಲೀಸ್ ಪಡೆಯ ನಿಯಂತ್ರಣ ಮೀರಿ ಪರಿಸ್ಥಿತಿ ಉಲ್ಬಣಗೊಂಡಿತು.

*****

ಫೆಬ್ರವರಿ ೧೪ರಿಂದ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್ - ಡಬ್ಲ್ಯೂಪಿಎಲ್ ೨೦೨೫ ಟಿ-೨೦ ಕ್ರಿಕೆಟ್ ಟೂರ್ನಿ ಅಂತಿಮ ಹಂತ ತಲುಪಿದ್ದು, ಇಂದು ಮುಂಬೈನ ಬ್ರಬಾರ್ನ್ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗು ಮುಂಬೈ ಇಂಡಿಯನ್ಸ್ ತಂಡಗಳು ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿವೆ. ಪಂದ್ಯ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.

***END**